## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–189 ಎಸ್.ಜಿ.ಪಾಳ್ಯ
## ಕಛೇರಿಯಲ್ಲಿ ದಿನಾಂಕ: 06.01.2023 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ–06–01–2023 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅಧ್ಯಕ್ಷರ ಅನುಪಸ್ಥಿತಿಯಲ್ಲಿದ್ದರಿಂದ ಶ್ರೀ ಸತೀಶ್.ಡಿ ಕಾರ್ಯದರ್ಶಿ ರವರು ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಹೊಸ ವರ್ಷದ ಶುಭಾಷಯಗಳನ್ನು ಹೇಳುತ್ತಾ, ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಮೊದಲಿಗೆ ಸಭೆಗೆ ಹಾಜರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿವರ್ಗ ಮತ್ತು ವಾರ್ಡ್ ಸದಸ್ಯರನ್ನು ಪರಿಚಯ ಮಾಡುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ .ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಸತೀಶ್.ಡಿ ಸಹಾಯಕ ಅಭಿಯಂತರರು ವಾರ್ಡ್152 ಎಸ್.ಜಿ.ಪಾಳ್ಯ | 9480688152 |
| ೦೨ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೩ | ಶ್ರೀ. ಮಲ್ಲಿಕಾರ್ಜುನ್ ಬಿರಾದರ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೪ | ಶ್ರೀ.ಸುರೇಶ್ ಎ.ಎಸ್.ಐ ಎಸ್.ಜಿ.ಪೋಲಿಸ್ ಠಾಣೆ | 8123010522 |
| ೦೫ | ಶ್ರೀ.ಯಶವಂತ ಮಾರ್ಷಲ್ | 9972601205 |
| ೦೬ | ಶ್ರೀ.ಡಾ॥ ಗೌತಮ್ ಪ್ರಕಾಶ್ ಹೆಚ್ ಮೆಡಿಕಲ್ ಆಫಿಸರ್ | 9986000094 |
| ೦೭ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾ.ನಿ | 9901002067 |
| ೦೮ | ಶ್ರೀ ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬೆಂಗಳೂರು ನೀರು ಸರಬರಾಜು | 9845768405 |
| ೦೯ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾ.ನಿ | 9980225272 |
| ೧೦ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೧ | ಶ್ರೀಮತಿ.ಭೂದೇವಿ ಕೆಲಸ ಪರಿವೀಕ್ಷರು ತೋಟಗಾರಿಕೆ ಇಲಾಖೆ | 9740903427 |
| ೧೨ | ಶ್ರೀ.ವೀರುಪಾಕ್ಷಿ.ವಿ. ಎ.ಎಸ್.ಐ ಮಡಿವಾಳ ಪೋಲೀಸ್ ಠಾಣೆ | 8310086006 |
| ೧೩ | ಶ್ರೀ ಯಶವಂತ.ಎನ್ ಕೆಲಸ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9611918180 |
| ೧೪ | ಶ್ರೀ.ಬಿ.ಟಿ.ಕೃಷ್ಣಮುರ್ತಿ ಸದಸ್ಯರು | 9902552550 |
| ೧೫ | ಶ್ರೀ.ಸೈಯದ್ ನಜರುದ್ದೀನ್ | 9741518897 |

1) ಮಾನ್ಯ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸುತ್ತಾ, ಮೊದಲನೇಯದಾಗಿ ಕಳೆದ ಸಭೆಗಳಲ್ಲಿ ಪ್ರಸ್ತಾಪಿಸಲಾಗಿದ್ದ ತಾವರೆಕೆರೆ ಮುಖ್ಯರಸ್ತೆಯಲ್ಲಿನ ಮ್ಯಾನ್‌ಹೋಲ್‌ಗಳನ್ನು ರಸ್ತೆಮಟ್ಟಕ್ಕೆ ಹೆಚ್ಚಿಸುವ ಕೆಲಸವನ್ನು ಪೂರ್ಣಗೊಳಿಸಲಾಗಿರುತ್ತದೆ ಎಂದು ಸಭೆಯಲ್ಲಿ ಹಾಜರಿದ್ದ ಶ್ರೀ ಕೃಷ್ಣ ಕೆಲಸ ಪರಿವೀಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ತಿಳಿಸಿದರು.

2) ಕಳೆದ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದ ಬೃಂದಾವನ ನಗರ ಪ್ರದೇಶ ವ್ಯಾಪ್ತಿಯ ಸಾರ್ವಜನಿಕ ಪ್ರದೇಶದಲ್ಲಿ ಧೂಮಪಾನ ಮಾಡುವುದು ಹೆಚ್ಚಾಗಿ ಕಂಡುಬಂದಿರುವುದರ ಬಗ್ಗೆ ಕೇಳಲಾಗಿ, ಈ ಸಂಬಂಧ ಈಗಾಗಲೇ ಅತಂಹ ಪ್ರಕರಣಗಳನ್ನು ಗುರುತಿಸಿ ದಂಡವಸೂಲಿ ಮಾಡಲಾಗುತ್ತಿರುತ್ತದೆ ಮತ್ತು ನೈಟ್ ಬಿಟ್ ಕೂಡ ಮಾಡುತ್ತಿರುತ್ತಿವೆ ಎಂದು ಸಭೆಯಲ್ಲಿ ಹಾಜರಿದ್ದ ಪೋಲಿಸ್ ಅಧಿಕಾರುಗಳು ತಿಳಿಸಿದರು.

3) ಶ್ರೀ ಬಿ.ಟಿ ಕೃಷ್ಣಮೂರ್ತಿರವರು ಮಾತನಾಡಿ, ವಾರ್ಡ್‌ವ್ಯಾಪ್ತಿಯ ಓಎಫ್‌ಸಿ ಕೇಬಲ್‌ಗಳು ಸಡಿಲವಾಗಿ ಕೆಳಭಾಗದಲ್ಲಿ ನೇತಾಡುತ್ತಿರುವುದು ಮತ್ತು ಸರಳವಾಗಿ ಕೈಗೆ ತಾಗುವಂತೆ ಕಂಡುಬಂದಿರುತ್ತದೆ ಸದರಿ ರಸ್ತೆಯಲ್ಲಿನ ಬೃಹತ್ ಗಾತ್ರದ ವಾಹನಗಳು ಸಂಚಾರಿಸುವ ವೇಳೆ ಅವಘಡವಾಗುವ ಸಂಬವವಿರುತ್ತದೆ. ಆದುದರಿಂದ ನೇತಾಡುತ್ತಿರುವ ಕೇಬಲ್‌ಗಳನ್ನು ಸರಿಪಡಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಗೆ ಹಾಜರಿದ್ದ ವಾರ್ಡ್ ಅಭಿಯಂತರರು ಕೂಡಲೇ ಸದರಿ ಕೇಬಲ್‌ಗಳನ್ನು ಕತ್ತರಿಸಿ ತೆರವುಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

4) ಶ್ರೀ ಸೈಯದ್ ಸನರೂದ್ದಿನ್‌ರವರು ಮಾತನಾಡಿ, 6ನೇ ಅಡ್ಡರಸ್ತೆ ಬಾಲಾಜಿನಗರ ಪ್ರದೇಶದಲ್ಲಿ ಸೊಳ್ಳೆಗಳು ಜಾಸ್ತಿಯಾಗಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಸಂಭವವಿರುತ್ತದೆ. ಆದುದರಿಂದ ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಗೆ ಹಾಜರಿದ್ದ ಶ್ರೀ.ಮಲ್ಲಿಕಾರ್ಜುನ್ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ಸದರಿ ಪ್ರದೇಶಕ್ಕೆ ಫಾಗಿಂಗ್ ಮತ್ತು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಕ್ರಮಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. ಹಾಗೂ ಶ್ರೀ ಸೈಯದ್ ಸನರೂದ್ದಿನ್‌ರವರು ಮಾತನ್ನು ಮುಂದುವರೆಸುತ್ತಾ, ರಾತ್ರಿ ಸಮಯದಲ್ಲಿ ಹೊರಗಡೆ ಒಣಗಲು ಹಾಕಿರುವ ಬಟ್ಟೆಗಳು ಕಾಣೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಿದ್ದ ಪೊಲೀಸ್ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದರು.

5) ಸಭೆಗೆ ಹಾಜರಿದ್ದ, ಶ್ರೀ ಬಿ.ಟಿ.ಕೃಷ್ಣಮೂರ್ತಿರವರು ಮಾತನಾಡಿ, ವೆಂಕಟೇಶ್ವರ ಬಡಾವಣೆ 2ನೇ ಮುಖ್ಯರಸ್ತೆಯಲ್ಲಿರುವ ಚರಂಡಿಯ ಹೂಳನ್ನು ಎತ್ತಿ ಅನುಪಯುಕ್ತ ಮಣ್ಣನ್ನು ಹಾಗೆಯೇ ಬಿಟ್ಟಿರುವುದರಿಂದ ಹಾಲಿ ಮಳೆ ಸುರಿಯುತ್ತಿರುವುದರಿಂದ ಸದರಿ ಮಣ್ಣು ಚರಂಡಿಯೊಳಗೆ ಹರಿಯುತ್ತದೆ ಮತ್ತು ಅಲ್ಲಿನ ವಾಹನ ಸವಾರರಿಗೆ ತೊಂದರೆಯಾಗುತ್ತಿರುತ್ತದೆ ಕೂಡಲೇ ಮಣ್ಣನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು. ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಾಡಿ ಸದರಿ ಕಾಮಗಾರಿಯ ಗುತ್ತಿಗೆದಾರರಿಂದ ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.

6) ಅದೇ ರೀತಿ ಶ್ರೀ ಬಿ.ಟಿ.ಕೃಷ್ಣಮೂರ್ತಿರವರು ಮಾತನಾಡಿ, ಕ್ರೈಸ್ಟ್ ಕಾಲೇಜು ಹಿಂಭಾಗದ ಗೇಟ್‌ನ ರಸ್ತೆಯಲ್ಲಿ ವಾಹನಗಳು ಪಾರ್ಕಿಂಗ್ ಮಾಡುತ್ತಿರುವುದು ಹೆಚ್ಚಾಗುತ್ತಿರುತ್ತದೆ. ಇದರಿಂದ ಸದರಿ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿರುತ್ತದೆ. ಆದುದರಿಂದ ಸದರಿ ಸ್ಥಳದಲ್ಲಿ ವಾಹನಗಳು ನಿಲುಗಡೆಗೆ ಅವಕಾಶ ನೀಡಬಾರದೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಸಭೆಗೆ ಹಾಜರಿದ್ದ ಸಂಚಾರಿ ಪೊಲೀಸ್ ಠಾಣೆ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ ಕೂಡಲೇ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದರು. ಹಾಗೆಯೇ ಮಾತನ್ನು ಮುಂದುವರೆಸುತ್ತಾ, ವಾರ್ಡ್‌ವ್ಯಾಪ್ತಿಯಲ್ಲಿ ಅಲ್ಲಲ್ಲಿ ಫ್ಲೆಕ್ಸ್ ಬ್ಯಾನರ್ಸ್ ಅಳವಡಿಸಿರುವುದು ಕಂಡುಬಂದಿದೆ. ಇದರಿಂದಾಗ ವಾರ್ಡಿನ ಸೌಂದರ್ಯೀಕರಣ ಹಾಳಾಗುತ್ತಿರುತ್ತದೆ ಎಲ್ಲಾ ಫ್ಲೆಕ್ಸ್ ಮತ್ತು ಬ್ಯಾನರ್‌ಸ್ನು ತೆರವುಗೊಳಸಬೇಕೆಂದು ಸಭೆಗೆ ತಿಳಿಸಿದರು. ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಾಡಿ ಈಗಾಗಲೇ ಫ್ಲೇಕ್ಸ್ ಮತ್ತು ಬ್ಯಾನರ್ಸ್‌ಗಳನ್ನು ತೆರವುಕಾರ್ಯಚರಣೆ ಪ್ರಗತಿಯಲ್ಲಿದ್ದು, ಇನ್ನೂಳಿದವುಗಳನ್ನೆಲ್ಲಾ ತೆರವುಗೊಳಿಸುವುದಾಗಿ ತಿಳಿಸಿದರು.

7) ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಲಾಗಿ, ಶ್ರೀ ಅಜಯ್ ಕಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಒಣತ್ಯಾಜ್ಯ ಮತ್ತು ಹಸಿ ತ್ಯಾಜ್ಯ ಸಮರ್ಪಕವಾಗಿ ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತಿರುತ್ತದೆ ಮತ್ತು ಬ್ಲಾಕ್ ಸ್ಪಾಟ್‌ಗಳ ಸಂಖ್ಯೆಗಳು ಆದಷ್ಟು ಕಡಿತಗೊಳಿಸಲು ಶ್ರಮವಹಿಸಲಾಗುತಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

(ಶ್ರೀ. ಅಶೋಕ್.ಎಸ್.ಬಿರಾದಾರ)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.